Number of Scheduled Castes Hostels that were transferred from Education Department to Social Welfare Department in the State during 1962 and 1963.

*Q.—886. Sri Y. RAMAKRISHNA (Yelahanka).—

Will the Government be pleased to state :—

(a) the number of Scheduled Castes Hostels that were transferred from Education Department to Social Welfare Department in the State during 1962 and 1963;

(b) the expenditure incurred by the Education Department per boarder per month and the expenditure incurring by the Social Welfare Department per boarder per month in these hostels;

(c) the difficulties and inconveniences experienced by the Education Department necessitating transfer of these hostels to Social Welfare Department ?

A.—Smt. YASHODARA DASAPPA (Minister for Social Welfare).—

(a) During 1962—Nil.
During 1963—12.

(b) Rs. 18 per boarder per month.

(c) There were no difficulties. This action was taken to secure uniformity, avoid duplication of work and secure administrative efficiency.

ಶ್ರೀ ವೈ. ರಾಮಕೃಷ್ಣ.—ವಿದ್ಯಾ ಇಲಾಖೆಯಿಂದ ಸಮಾಜಕಲ್ಯಾಣ ಇಲಾಖೆಗೆ 12 ಹಾಸ್ಟಲುಗಳನ್ನು ತೆಗೆದುಕೊಂಡಿರುತ್ತೀರಿ. ವಿದ್ಯಾ ಇಲಾಖೆಯ ಅಡಳಿತದಲ್ಲಿದ್ದಾಗ ಒಬ್ಬ ವಿದ್ಯಾರ್ಥಿಗೆ 30 ರೂಪಾಯಿ ಬೀಳುತ್ತಿತ್ತು. ಸಮಾಜಕಲ್ಯಾಣ ಇಲಾಖೆಗೆ ಸೇರಿದ ಮೇಲೆ 18 ರೂಪಾಯಿ ಮಾತ್ರ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ನಾವು 18 ರೂಪಾಯಿ ಗಳನ್ನು ಕೊಡುತ್ತೇವೆ. ವಿದ್ಯಾ ಇಲಾಖೆಯವರು ಕೊಡುವುದೂ 18 ರೂಪಾಯಿ. ವಿದ್ಯಾ ಇಲಾಖೆಯವರು 30 ರೂಪಾಯಿಗಳಂತೆ ಕೊಡುತ್ತಿದ್ದರು ಎಂಬುದನ್ನು ನಮ್ಮ ಗಮನಕ್ಕೆ ತಂದರೆ ವಿಚಾರಿಸಿ ಅದೇರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧಳಾಗಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಈ 12 ಹಾಸ್ಟಲುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಶ್ರೀಮತಿ ಯಶೋಧರ ದಾಸಪ್ಪ.—ಅದನ್ನು ತಿಳಿದುಕೊಂಡು ಹೇಳುತ್ತೇನೆ.

Sri G. DUGGAPPA.—When these 12 hostels were under the management of the Education Department, the High School Headmasters and the Headmasters of some educational institutions used to be Superintendents and Divisional Supervisors. May I know who are managing the Hostels after they are taken over by the Social Welfare Department—whether by the officials of the Education Department or Social Welfare Department ?

ಶ್ರೀಮತಿ ಯಶೋಧರ ದಾಸಪ್ಪ.—ಸಮಾಜಕಲ್ಯಾಣ ಇಲಾಖೆಯವರು ನೋಡಿಕೊಳ್ಳುತ್ತಾರೆ.

ಶ್ರೀ ಜಿ. ವಿ. ಗೌಡ.—12 ವಿದ್ಯಾರ್ಥಿನಿಲಯಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಈಗ ವಿದ್ಯಾ ಇಲಾಖೆಯ ಅಡಳಿತದಲ್ಲಿ ಇನ್ನು ಯಾವುದೂ ನಿಮ್ಮವರ್ಗದ ಹಾಸ್ಟಲುಗಳಿಲ್ಲವೆ ?

ಶ್ರೀಮತಿ ಯಶೋಧರ ದಾಸಪ್ಪ.—ಗ್ರಾಂಟ್-ಇನ್-ಏಡ್ ಹಾಸ್ಟಲುಗಳು ಅವರ ಕಡೆಯೇ ಉಳಿದಿವೆ.

Sri G. DUGGAPPA.—It was only in ex-Mysore area that these Hostels were managed by the Government under the Education Department. May I know whether there were any such Hostels in the erstwhile Bombay, Madras and Coorg areas?

ಶ್ರೀಮತಿ ಯಶೋಧರ ದಾಸಪ್ಪ.—ಸಮಾಜಕಲ್ಯಾಣ ಇಲಾಖೆಯವರು ಅವುಗಳ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ.

Sri G. DUGGAPPA.—May I know the number of such hostels managed by the Social Welfare Department?

ಶ್ರೀಮತಿ ಯಶೋಧರ ದಾಸಪ್ಪ.—ಸುಮಾರು 70-80 ಹಾಸ್ಟಲುಗಳನ್ನು ಸಮಾಜಕಲ್ಯಾಣ ಇಲಾಖೆಯವರು ನಡೆಸುತ್ತಿದ್ದಾರೆ. ವಿವರಗಳನ್ನು ಆಮೇಲೆ ನಿಮಗೆ ಕೊಡುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ.—ಈ ಹಾಸ್ಟಲುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ಖಾಯಂ ಆಗಿ ಏನು ವ್ಯವಸ್ಥೆಯನ್ನು ಮಾಡಿದ್ದೀರಿ?

ಶ್ರೀಮತಿ ಯಶೋಧರ ದಾಸಪ್ಪ.—ಹಾಸ್ಟಲುಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ವಾರ್ಡನ್ ಇರುತ್ತಾರೆ, ಸಮಾಜಕಲ್ಯಾಣ ಇಲಾಖೆಯ ಇನ್‌ಸ್ಪೆಕ್ಟರೂ, ಅಫೀಸರುಗಳೂ ಇರುತ್ತಾರೆ. ಅವರೆಲ್ಲರೂ ನೋಡಿಕೊಳ್ಳುತ್ತಾರೆ. ಕೆಲವು ಕಡೆ ವಿದ್ಯಾ ಇಲಾಖೆಯವರನ್ನೂ ವಾರ್ಡನ್ ಆಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಗೋಪಾಲ ಸಾರನ್ನ.—ವಿದ್ಯಾ ಸಂಬಂಧವಾದ ಹಾಸ್ಟಲುಗಳನ್ನು ವಿದ್ಯಾ ಇಲಾಖೆಯವರು ನಡೆಸಬೇಕು. ಈ ವಿಷಯದಲ್ಲಿ ಯೂನಿಫಾರ್ಮಿಟಿ ಬರಬೇಕು ಎಂದು ಎಜುಕೇಷನ್ ಸಬ್-ಕಮಿಟಿ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಹೀಗಿರುವಾಗ ವಿದ್ಯಾ ಇಲಾಖೆಯಿಂದ ತೆಗೆದುಕೊಂಡಿರುವ ಮತ್ತು ನಿಮ್ಮ ಕಡೆಗೆ ಇರುವ ಹಾಸ್ಟಲುಗಳನ್ನೆಲ್ಲ ವಿದ್ಯಾ ಇಲಾಖೆಗೆ ಏಕೆ ಕೊಡಬಾರದು?

ಶ್ರೀಮತಿ ಯಶೋಧರ ದಾಸಪ್ಪ.—ಶ್ರೀ ದುಗ್ಗಪ್ಪನವರು ಕೇಳಿದ ಪ್ರಶ್ನೆಗೆ ಉತ್ತರವಾಗಿ, ವಿದ್ಯಾ ಇಲಾಖೆ 3,15,230 ರೂಪಾಯಿಗಳನ್ನು ನಮಗೆ ಒದಗಿಸಿದೆ ಮತ್ತು ಸುಮಾರು 1,040 ವಿದ್ಯಾರ್ಥಿಗಳು ಆ ಹಾಸ್ಟಲುಗಳಲ್ಲಿದ್ದಾರೆ. ಶ್ರೀ ಗೋಪಾಲ ಸಾರನ್ನರವರು ಕೇಳಿದ್ದಕ್ಕೆ ಅಡ್ವೈಸರಿ ಬೋರ್ಡ್ ಸಬ್‌ಕಮಿಟಿ ಸಭೆ ಸೇರಿ ಸಮಾಜಕಲ್ಯಾಣ ಇಲಾಖೆಯಲ್ಲಿ ನಡೆಯುತ್ತಿರುವ ಎಲ್ಲ ಹಾಸ್ಟಲುಗಳನ್ನೂ ವಿದ್ಯಾ ಇಲಾಖೆಗೆ ಕೊಡುವ ಒಂದು ನಲಹೆಯನ್ನು ಮಾಡಿದ್ದಾರೆ. ಈ 12 ಹಾಸ್ಟಲುಗಳನ್ನು ತೆಗೆದುಕೊಳ್ಳಬೇಕಾದರೆ ಹಿಂದೆ ವಿದ್ಯಾ ಇಲಾಖೆ ಮತ್ತು ಸಮಾಜಕಲ್ಯಾಣ ಇಲಾಖೆಯವರಿಬ್ಬರೂ ಸೇರಿ ಹಾಸ್ಟಲುಗಳೆಲ್ಲ ಒಂದೇಕಡೆಗೆ ಇದ್ದರೆ ಅವುಗಳನ್ನು ಚೆನ್ನಾಗಿ, ವ್ಯವಸ್ಥಿತವಾಗಿ ನೋಡಿಕೊಳ್ಳಬಹುದು ಎಂದು ತೀರ್ಮಾನವಾಗಿದೆ. 1961ನೆ ಇಸವಿಯಲ್ಲಿ ಆಗಿನ ಮುಖ್ಯಮಂತ್ರಿಗಳು, ವಿದ್ಯಾಮಂತ್ರಿಗಳು ಮತ್ತು ಸಮಾಜಕಲ್ಯಾಣ ಮಂತ್ರಿಗಳೂ ಸೇರಿ ತೀರ್ಮಾನ ಮಾಡಿದ್ದು, ನನ್ನ ಅಭಿಪ್ರಾಯಕ್ಕಾಗಿ ಬಂದಾಗ ನಾನೂ ಆದೇ ಅಭಿಪ್ರಾಯವನ್ನು ಅನುಮೋದಿಸಿದ್ದರಿಂದ 12 ಹಾಸ್ಟಲುಗಳೂ ನಮ್ಮ ಮೇಲ್ವಿಚಾರಣೆಗೆ ಬಂದಿವೆ. ಈಗ ಎಲ್ಲ ಹಾಸ್ಟಲುಗಳನ್ನೂ ಸಂಪೂರ್ಣವಾಗಿ ವಿದ್ಯಾ ಇಲಾಖೆಗೇ ವಹಿಸಬೇಕೆಂದು ಒಂದು ನಲಹೆ ಬಂದಿದೆ. ಅದನ್ನು ಸರ್ಕಾರ ತೀರ್ಮಾನ ಮಾಡಬೇಕು. ಯಾವರೀತಿ ಮಾಡಬೇಕು, ಹೇಗೆ ಮಾಡಬೇಕು, ಹಾಗಿದ್ದಮೇಲೆ ಸಮಾಜಕಲ್ಯಾಣ ಇಲಾಖೆ ಇದ್ದೂ ಏನು ಪ್ರಯೋಜನ ಎಂದುನ್ನು ಯೋಚನೆ ಮಾಡಬೇಕು.

Constitution of an elected Municipal Civic Body to Kolar Gold Fields.

*Q.—948. Sri S. RAJAGOPAL (K.G.F.).—

Will the Government be pleased to state :—

the steps they intend to take to constitute an elected Municipal Civic Body to Kolar Gold Fields?